IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಹಳಗನ್ನಡ ಪಠ್ಯಗಳನ್ನು ಬೋಧಿಸುವ ವಿಧಾನಗಳು

**ಶ್ರೀನಿವಾಸ ದೊಡ್ಡಮನಿ, ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ**

**ಬಿಎಲ್‌ಡಿಇಎ ಸಂಸ್ಥೆಯ ಎಸ್‌ಬಿ ಕಲಾ ಮತ್ತು ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ**

ಪ್ರಾಚೀನ ಸಾಹಿತ್ಯವನ್ನು ಹಳೆಗನ್ನಡ ಸಾಹಿತ್ಯ ಎಂದು ಕರೆಯುತ್ತೇವೆ. ಆದಿಕವಿ ಪಂಪನಿಂದ ಪ್ರಾರಂಭವಾಗಿ ಮುದ್ದಣನ ಕಾಲದವರೆಗೂ ಬೇರೆ ಬೇರೆ ಕಾಲಘಟ್ಟಗಳಲ್ಲಿ ಹಳಗನ್ನಡದ ಕಾವ್ಯಗಳು (ಪಠ್ಯಗಳು) ರಚನೆಯಾಗಿವೆ. ಆದರೆ ಸಾಹಿತ್ಯ ಚರಿತ್ರಾಕಾರರು ಅಧ್ಯಯನದ ದೃಷ್ಟಿಯಿಂದ ಸಾಹಿತ್ಯವನ್ನು ನಾಲ್ಕು ಘಟ್ಟಗಳಲ್ಲಿ ವರ್ಗೀಕರಿಸಿದ್ದಾರೆ. ಆದಿಕವಿ ಪಂಪನಿಗಿಂತ ಪೂರ್ವದಲ್ಲಿದ್ದ ಕನ್ನಡ ಸಾಹಿತ್ಯವನ್ನು ಪೂರ್ವದ ಹಳಗನ್ನಡವೆಂದು, ಪಂಪನಿಂದ ಬಸವಣ್ಣನ ವರೆಗೆ ರಚನೆಯಾದ ಸಾಹಿತ್ಯವನ್ನು ಹಳಗನ್ನಡ ಸಾಹಿತ್ಯವೆಂದು, ಬಸವಣ್ಣನಿಂದ ಮುದ್ದಣನ ವರೆಗೆ ಇರುವ ಸಾಹಿತ್ಯವನ್ನು ನಡುಗನ್ನಡವೆಂದು, ಮುದ್ದಣನ ನಂತರದ ಕಾಲದಲ್ಲಿ ರಚನೆಯಾದ ಸಾಹಿತ್ಯವನ್ನು ಹೊಸಗನ್ನಡವೆಂದು ವಿಂಗಡಿಸಿಕೊಳ್ಳಲಾಗಿದೆ. ಇದು ಕೇವಲ ಅಧ್ಯಯನದ ದೃಷ್ಟಿ ಎಂಬದನ್ನು ಮರೆಯುವಂತಿಲ್ಲ. ಹಳಗನ್ನಡ ಎಂಬುದನ್ನು ಹೀಗೂ ಅರ್ಥೈಸಬಹುದಾಗಿದೆ. ಅಂದರೆ, ಪ್ರಾಚೀನ ಕನ್ನಡ ಭಾಷೆಯಲ್ಲಿ ರಚಿಸಿದ ಸಾಹಿತ್ಯವನ್ನು ಹಳಗನ್ನಡ ಸಾಹಿತ್ಯವೆಂದು ಕರೆಯಬಹುದಾಗಿದೆ. ಆದರೆ ಇಂದು ಪ್ರಾಚೀನ ಕಾಲದ ಸಾಹಿತ್ಯ, ಅಭಿಜಾತ ಸಾಹಿತ್ಯ ಎಂಬ ಹೊಸ ಹೊಸ ಪರಿಕಲ್ಪನೆಗಳು ಮೂಡಿಬಂದಿವೆ. ಈ ಸಾಹಿತ್ಯವು ಹಳಮೆಯುಳ್ಳದ್ದು. ಇದರ ಓದು ಸಹಿತ ವಿಶಿಷ್ಟವಾದುದು. ಪ್ರಾಚೀನ ಸಾಹಿತ್ಯವನ್ನು ಅಧ್ಯಯನಕ್ಕೊಳಪಡಿಸಿದರೆ ಕೆದಕಿದಷ್ಟು ನಿಧಿ ಸಿಗುತ್ತದೆ. ಅಧ್ಯಯನದ ದೃಷ್ಟಿಕೋನಗಳು ಬದಲಾದಂತೆ ಹೊಸ ಹೊಸ ವಿಚಾರಗಳಿಗೆ ನಾಂದಿ ಹಾಡುತ್ತವೆ. ಪಂಪ. ರನ್ನ, ಪೊನ್ನ, ಜನ್ನ, ರಾಘವಾಂಕ, ಹರಿಹರ, ರತ್ನಾಕರವರ್ಣಿ, ಷಡಕ್ಷರದೇವ, ಮೊದಲಾದ ಕವಿಗಳ ಪಠ್ಯಗಳನ್ನು ಇಂದು ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ. ಈ ಪಠ್ಯಗಳ ಕುರಿತಾಗಿ ನಡೆದ ಅಧ್ಯಯನಗಳು ಪ್ರಾರಂಭದಲ್ಲಿ ಚಾರಿತ್ರಿಕ ದೃಷ್ಟಿಯಿಂದ ಅಧ್ಯಯನಕ್ಕೊಳಪಡಿಸಲಾಯಿತು. ತದನಂತರ ಆ ಕಾವ್ಯಗಳ ಮೌಲ್ಯೀಕರಣಯುಗ ಪ್ರಾರಂಭವಾಯಿತು. ವಿಭಿನ್ನ ದೃಷ್ಟಿಕೋನದ ಹಿನ್ನಲೆಯಲ್ಲಿ ಹಳಗನ್ನಡ ಪಠ್ಯಗಳ ಅಧ್ಯಯನ ಮತ್ತು ಬೋಧನೆ ಆರಂಭವಾಗಿದ್ದವು. ಬರುಬರುತ್ತ ಆ ಪಠ್ಯಗಳ ಒಳನೋಟದ ಕಡೆಗೆ ಗಮನಹರಿಸಿದ್ದರಿಂದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಪಠ್ಯಗಳನ್ನು ಬೋಧಿಸುವ ವಿಧಾನ ಇಂದು ಪ್ರಸ್ತುತದಲ್ಲಿದೆ. ಹಳಗನ್ನಡ ಪಠ್ಯಗಳನ್ನು ಬೋಧಿಸುವ ವಿಧಾನಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುತ್ತವೆ. ಅವರು ತಮ್ಮದೇ ಆದ ಬೋಧನಾ ವಿಧಾನಗಳನ್ನು ಅಳವಡಿಸಿಕೊಂಡು ಬೋಧಿಸುವ ಕ್ರಮವನ್ನು ನಾವಿಂದು ಕಾಣುತ್ತೇವೆ.

ಹಳಗನ್ನಡ ಪಠ್ಯಗಳನ್ನು ಬೋಧಿಸುವಾಗ ಕಲಿಕಾರ್ಥಿಯ ವಯೋಮಾನ, ಮಾನಸಿಕತೆ, ಬೌದ್ಧಿಕ ಸಾಮರ್ಥ್ಯಗಳನ್ನು ಗಮನದಲ್ಲಿರಿಸಿಕೊಂಡಿರಬೇಕಾಗುತ್ತದೆ. ಈ ಪಠ್ಯಗಳನ್ನು ಬೋಧಿಸಿದ ನಂತರ ಅದನ್ನು ಆ ಕಲಿಕಾರ್ಥಿಯು ಎಷ್ಟರ ಮಟ್ಟಿಗೆ ಅರ್ಥೈಸಿಕೊಳ್ಳುತ್ತಾನೆ ಎಂಬುದರ ಕಡೆಗೆ ಬೋಧಕರ ಚಿಂತನೆಗಳಿರಬೇಕಾಗುತ್ತದೆ. ಏಕೆಂದರೆ ಅವರ ಅರ್ಥಗ್ರಹಿಕಾ ಸಾಮರ್ಥ್ಯ ಎಷ್ಟಿದೆ ಎಂಬುದನ್ನು ಮನೋವೈಜ್ಞಾನಿಕ ನೆಲೆಯಲ್ಲಿ ತಿಳಿದುಕೊಂಡಿರುವುದು ಬೋಧಕರಿಗೆ ಅವಶ್ಯಕವಾದುದು. ಪ್ರಸ್ತುತ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಲ್ಲಿ ಹಳಗನ್ನಡ ಪಠ್ಯಗಳು ಕಠಿಣವಾದವು ಎಂಬ ನಂಬಿಕೆ ಬೇರೂರಿದೆ. ಈ ಪಠ್ಯಗಳು ಕಠಿಣವಲ್ಲ ಸುಲಿದ ಬಾಳೆಯ ಹಣ್ಣಿನಂತೆ ಎಂಬುದನ್ನು ಅರ್ಥೈಸುವ ಗುರುತರವಾದ ಜವಾಬ್ದಾರಿ ಬೋಧಕರ ಬೋಧನೆಯ ಮೇಲೆ ನಿಂತಿರುತ್ತದೆ. ಈ ಪಠ್ಯಗಳು ಕಠಿಣವಾದವು ಎಂಬುದನ್ನು ಬೋಧಿಸುವವರೇ ಕಲಿಕಾರ್ಥಿಗೆ ತೋರಿಸಿದರೆ ಅದು ಕಬ್ಬಿಣದ ಕಡಲೆಯಾಗಿಯೇ

ಉಳಿಯುತ್ತದೆ. ಹಾಗಾಗಿ ಅದನ್ನು ಸುಲಭೀಕರಿಸಲು ಹಳಗನ್ನಡ ಪಠ್ಯ ಬೋಧನೆಯ ಸಂದರ್ಭದಲ್ಲಿ ಕೆಲವು ಬೋಧನಾ ವಿಧಾನಗಳನ್ನು ಅಳವಡಿಸಿಕೊಂಡು ಬೋಧಿಸಬೇಕಾಗುತ್ತದೆ. ಆ ಬೋಧನಾ ವಿಧಾನಗಳೆಂದರೆ; **1. ಖಂಡ ಪದ್ಧತಿ 2. ಅಖಂಡ ಪದ್ಧತಿ, 3. ಅರ್ಥವಿಶ್ಲೇಷಣಾ ಪದ್ಧತಿ, 4. ಗಮಕ ಕಲೆ, 5. ತಾರ್ಕಿಕ ಮತ್ತು ಚರ್ಚಾ ವಿಧಾನ, 6. ಪ್ರಾಯೋಗಿಕ ವಿಧಾನ** ಮೊದಲಾದ ವಿಧಾನಗಳನ್ನು ಬೋಧನೆಯಲ್ಲಿ ಅಳವಡಿಸಿಕೊಂಡು ಪಠ್ಯ ಬೋಧನೆ ಮಾಡಿದರೆ ಅದು ಸೂಕ್ತವೆನಿಸುತ್ತದೆ. ಈ ಬೋಧನಾ ವಿಧಾನಗಳಲ್ಲಿ ಬೋಧಿಸುವ ಕ್ರಮವನ್ನು ಈ ಕೇಳಗಿನಂತೆ ನೋಡಬಹುದು.

### 1. ಖಂಡ ಪದ್ಧತಿ :

ಖಂಡ ಪದ್ಧತಿ ಎಂದರೆ ಸಾಂಪ್ರಾಯಿಕ ಪದ್ಧತಿ ಎಂದರ್ಥ. ಪ್ರಾಚೀನ ಸಾಹಿತ್ಯವನ್ನು ಬೋಧಿಸುವಾಗ ಈ ಪದ್ಧತಿಯಲ್ಲಿ ಬೋಧಿಸುವುದು ಸೂಕ್ತವೆನಿಸುತ್ತದೆ. "ಒಂದು ಪದ್ಯವನ್ನು ಬಿಡಿ ಬಿಡಿ ಭಾಗಗಳಾಗಿ ಮಾಡಿ ಆ ಬಿಡಿ ಭಾಗಗಳನ್ನು ಓದಿ ಅರ್ಥೈಸಿಕೊಡುತ್ತಾ ಪದ್ಯವನ್ನು ಅನುವಾದ ಮಾಡುತ್ತಾ ಅಥವಾ ಪದ್ಯದ ಸಾರಾಂಶವನ್ನು ಬೋಧಿಸುವುದೇ ಖಂಡ ಪದ್ಧತಿ**"**.[1] ಎನ್ನುವರು. ಹಳಗನ್ನಡದ ಪಠ್ಯವನ್ನೂ ಬೋಧಿಸುವಾಗ ಆ ಪಠ್ಯದಲ್ಲಿರುವ ಪದ್ಯಗಳನ್ನು ವಿಗ್ರಹಿಸಿ ಹೇಳಬೇಕಾಗುತ್ತದೆ. ಏಕೆಂದರೆ ಛಂದೋನಿಯಮಕ್ಕೆ ಒಳಪಟ್ಟು ಕಾವ್ಯಗಳ ರಚನೆಯಾಗುವುದರಿಂದ ಸಂಧಿ, ಸಮಾಸ ಕ್ರಿಯೆಯಿಂದ ಪದಗಳಾಗಿರುತ್ತವೆ. ಈ ಪದಗಳನ್ನು ವಿಗ್ರಹಿಸದೆ ವಾಚಿಸಿದರೆ ಅದು ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ಪದ ವಿಗ್ರಹಿಸುವಾಗಲೂ ಸ್ವಲ್ಪ ಹೆಚ್ಚು ಕಡಿಮೆಯಾದರೆ ಅದರ ಅರ್ಥಸ್ಪಷ್ಟತೆಗೆ ಧಕ್ಕೆಯಾಗುತ್ತದೆ. ಆ ಕಾರಣಕ್ಕೆ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಪದಗಳನ್ನು ವಿಗ್ರಹಿಸಬೇಕಾಗುವುದು. ಒಂದು ಸಾರಿ ಪದ ವಿಗ್ರಹಿಸುವುದನ್ನು ಕಲಿಸಿದರ ಅದನ್ನೇ ಮುಂದಿನ ಪದ್ಯಕ್ಕೂ ಅನ್ವಯಿಸಿ ವಿದ್ಯಾರ್ಥಿ ಕಲಿಯಲು ಪ್ರಾರಂಭಿಸುತ್ತಾನೆ. ಇದರಿಂದ ಶಿಕ್ಷಕರ ಶ್ರಮದ ಉಳಿತಾಯವಾಗಿ ಕಲಿಸುವ ಉದ್ದೇಶವೂ ಈಡೇರುತ್ತದೆ.

**ಉದಾ:**

ಪಂಪಭಾರತದಲ್ಲಿ ದ್ರೋಣಾಚಾರ್ಯರು ಕೌರವ ಪಾಂಡವರಿಗೆ ಬಿಲ್ವಿದ್ಯೆಯನ್ನು ಕಲಿಸಿದಾಗ ಅರ್ಜುನನಿಗೆ ಗುರುದಕ್ಷಿಣೆಯಾಗಿ ದ್ರುಪದ ರಾಜನನ್ನು ಸೇರೆಹಿಡಿದು ತಂದುಕೊಡುವಂತೆ ಹೇಳುವ ಸಂದರ್ಭದ ಒಂದು ಪದ್ಯವನ್ನು ಬಿಡಿಸುವ ಕ್ರಮವನ್ನು ಈ ರೀತಿಯಾಗಿ ತೋರಿಸಬಹುದು.

**ಚಂ ॥ ಅಣಗಿನೊಳೆನ್ನ ಚಟ್ಟರೊಳಗೀತನೆ ಜೆಟ್ಟಿಗನೆಂದು ವಿದ್ಯೆಯಂ**
**ಗುಣಕಱುಗೊಂಡು ಕೊಟ್ಟೆನಗೆ ಸಂತಸಮಪ್ಪಿನಮೀವ ನಿನ್ನ ದ**
**ಕ್ಷಿಣೆಯದು ಬೇಗಮಾ ದ್ರುಪದನಂ ಗಡ ಕೋಡಗಗಟ್ಟುಗಟ್ಟಿ ತಂ**
**ದಣಿಯರಮೊಪ್ಪಿಸಿಂತಿದನೆ ಬೇಡಿದೆನಾಂ ಪರಸೈನ್ಯಭೈರವಾ ॥**[2]

ಇದನ್ನು ವಿಗ್ರಹಿಸಿದಾಗ

**ಚಂ ॥ ಅಣಗಿನೊಳು ಎನ್ನ ಚಟ್ಟರೊಳಗೆ ಈತನೆ ಜೆಟ್ಟಿಗನು ಎಂದು ವಿದ್ವೆಯಂ**
**ಗುಣಕಱುಗೊಂಡು ಕೊಟ್ಟು ಎನಗೆ ಸಂತಸಮಪ್ಪಿನಮೀವ ನಿನ್ನ ದ**
**ಕ್ಷಿಣೆಯದು ಬೇಗಮಂ ಆ ದ್ರುಪದನಂ ಗಡ ಕೋಡಗಗಟ್ಟು ಕ(ಗ)ಟ್ಟಿ ತಂ**
**ದು ಅಣಿಯರಂ ಒಪ್ಪಿಸಿಂತು ಇದನೆ ಬೇಡಿದೆ ನಾಂ ಪರಸೈನ್ಯ ಭೈರವಾ ॥**

ಹೀಗೆ ಬಿಡಿಸಿ ವಾಚಿಸುವುದರಿಂದ ವಿದ್ಯಾರ್ಥಿಗಳಿಗೆ ಸುಲಭವಾಗಿ ಆ ಪದ್ಯ ಅರ್ಥವಾಗುತ್ತದೆ. ಇದೇ ಕ್ರಮವನ್ನು ಮುಂದಿನ ಪದ್ಯಗಳಿಗೆ ಅನ್ವಯಿಸಿ ಓದಲು ಆರಂಭಿಸುತ್ತಾರೆ.

ಹಳಗನ್ನಡ ಪಠ್ಯಗಳು ಛಂದೋನಿಯಮಗಳಾದ ಚಂಪು, ಷಟ್ಪದಿ, ರಗಳೆ, ಸಾಂಗತ್ಯ ಮತ್ತು ತ್ರಿಪದಿ (ಶಾಸನ ಪದ್ಯ) ಮೊದಲಾದ ಪ್ರಕಾರಗಳಲ್ಲಿ ರಚನೆಯಾಗಿವೆ. ಇವು ಮೂರು, ನಾಲ್ಕು ಇಲ್ಲವೇ ಆರು ಸಾಲಿನ ಪದ್ಯಗಳಿಂದ ಕೂಡಿದ್ದು ಅದರಲ್ಲಿ ಕವಿಯು ತನ್ನ

ಭಾವನೆಗಳನ್ನು ಅಡಗಿಸಿಟ್ಟಿರುತ್ತಾನೆ. ಅದನ್ನು ಬಿಡಿಸಿದಾಗ ಮಾತ್ರ ಕವಿಯ ಉದ್ದೇಶ ಗೋಚರವಾಗುತ್ತದೆ. ಆ ಪದ್ಯದ ಮಹತ್ವವನ್ನು ತಿಳಿಯಲು ಸಾಧ್ಯವಾಗುವುದು.

ಉದಾ :

ರಾಘವಾಂಕ ಕವಿಯು ರಚಿಸಿದ ಹರಿಶ್ಚಂದ್ರ ಕಾವ್ಯದಲ್ಲಿ ಲೋಹಿತಾಶ್ವನ ಸಾವು ಸಂಭವಿಸಿದಾಗ ಆ ಮಗುವಿನ ಹೆಣವನ್ನು ಎತ್ತಿಕೊಂಡು ಬಂದು ಚಿತೆಯಲ್ಲಿಟ್ಟು ಸುಡಲು ಅಣಿಯಾದಾಗ ಹರಿಶ್ಚಂದ್ರ ಬಂದು ತಡೆದು ಮಗುವನ್ನು ಚಿತೆಯಿಂದ ಕೆಳಗೆ ಬಿಸಾಡುತ್ತಾನೆ. ಆಗ ಚಂದ್ರಮತಿ ಹರಿಶ್ಚಂದ್ರನಿಗೆ ಹೇಳುವ ಸಂದರ್ಭದ ಒಂದು ಷಟ್ಪದಿ ಪದ್ಯ ಹೀಗಿದೆ.

**ಬಿಸುಟದಿರು ಬಿಸುಟದಿರು ಬೇಡಬೇಡಕಟಕಟ**

**ಹಸುಳೆನೊಂದಹನೆಂದು ಬೀಳ್ವವನನೆತ್ತಿ ತ**

**ಕ್ಕಿಸಿಕೊಂಡು ಕುಲವನೋಡದೆ ಬೇಡಿಕೊಂಬೆನಿವನೆನ್ನ ಮಗನಲ್ಲ ನಿನ್ನ ।**

**(ಅರ್ಧಪದ್ಯ ಹರಿಶ್ಚಂದ್ರ ಕಾವ್ಯ)**

ಈ ಮೇಲಿನ ಪದ್ಯದಲ್ಲಿ ಚಂದ್ರಮತಿಯು ಹರಿಶ್ಚಂದ್ರನಿಗೆ ಮಗುವನ್ನು ಬಿಸಾಡಬೇಡ ಮಗುವಿಗೆ ನೋವಾಗುತ್ತದೆ ಎಂಬ ಧ್ವನಿ ಎದ್ದು ತೋರುತ್ತದೆ. ಇಲ್ಲಿ ಸತ್ತ ಮಗುವಿಗೆ ನೋವಾಗುವುದೆಂದರೆ ವಿಪರ್ಯಾಸವೆನಿಸುತ್ತದೆ. ಆದರೆ ಅದರ ಹಿಂದಿರು ಧ್ವನಿ ಮಾತ್ರ ಮಗುವಿನ ಮೇಲೆ ಅವಳಿಗಿದ್ದ ಅಪಾರ ಪ್ರೀತಿಯನ್ನು ಧ್ವನಿಸುತ್ತದೆ. 'ಕುಲವ ನೋಡದೆ ಬೇಡಿಕೊಂಬೆನು' ಎನ್ನುವ ಮಾತು ಭಾರತೀಯ ಸಂಸ್ಕೃತಿಯಲ್ಲಿ ಸತ್ತ ವ್ಯಕ್ತಿಗೆ ಶವಸಂಸ್ಕಾರ ಆಗಲೇಬೇಕು. ಇಲ್ಲದಿದ್ದರೆ ಮುಕ್ತಿ ಪ್ರಾಪ್ತವಾಗುವುದಿಲ್ಲ ಎಂಬ ನಂಬಿಕೆಯಿದೆ. ಆದ್ದರಿಂದ ತನ್ನ ಮಗುವಿಗೆ ಮುಕ್ತಿ ಪ್ರಾಪ್ತವಾಗಬೇಕೆಂಬ ಬಲವಾದ ನಂಬಿಕೆ ಅವಳಲ್ಲಿರುವಂತೆ ತೋರುತ್ತದೆ. ಹಾಗಾಗಿ ತಾನು ಅರಸು ಕುಲಕ್ಕೆ ಸೇರಿದವಳು ಎಂಬುದನ್ನು ಲೆಕ್ಕಿಸದೆ ತನ್ನ ಮಗುವಿನ ಶವಸಂಸ್ಕಾರ ಮಾಡಲು ಅವಕಾಶವನ್ನು ಬೇಡಿಕೊಳ್ಳುತ್ತಾಳೆ. ಇಂತಹ ವಿಷಯವನ್ನು ತಿಳಿಸಬೇಕಾದರೆ ಖಂಡ ಪದ್ಧತಿಯಲ್ಲಿ ಪದ್ಯಗಳನ್ನು ಬೋಧಿಸುವುದು ಸೂಕ್ತವೆನಿಸುತ್ತದೆ.

## 2. ಅಖಂಡ ಪದ್ಧತಿ :

'ಅಖಂಡ ಪದ್ಧತಿ' ಎಂದರೆ ಹಳಗನ್ನಡ ಪದ್ಯಗಳನ್ನು ಸಮಗ್ರವಾಗಿ ಬೋಧಿಸುವುದು ಎಂದರ್ಥ. ಹಳಗನ್ನಡದ ಪಠ್ಯಗಳನ್ನು ಪೂರ್ಣವಾಗಿ ಬೋಧಿಸುವುದರಿಂದ ಕವಿಯ ಪೂರ್ಣ ಭಾವನೆಯನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಇದರಿಂದ ಕಾವ್ಯ ವಸ್ತುವಿನ ಭಾವಗ್ರಹಣ, ಸೌಂದರ್ಯಪ್ರಜ್ಞೆ, ರಸಭಾವಗಳು, ವಸುವನ್ನು ಹೆಣೆದ ಶೈಲಿ, ಗಾದೆ, ನುಡಿಗಟ್ಟುಗಳು, ಮೌಲ್ಯಗಳು, ಛಂಧಸ್ಸಿನ ನಿಯಮಗಳು, ಅಲಂಕಾರಗಳು, ಅಷ್ಟವರ್ಣನೆಗಳು, ಚಾರಿತ್ರಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ಸಾಹಿತ್ಯಿಕ, ದೇಶೀ ಸಂಸ್ಕೃತಿಯ ವಿಚಾರಗಳನ್ನು ಸಮಗ್ರವಾಗಿ ಅರಿಯಲು ಸಹಕಾರಿಯಾಗುತ್ತದೆ. ಇದಲ್ಲದೆ ಕಾವ್ಯದ ಮೌಲ್ಯವನ್ನು ಎತ್ತಿ ತೋರಿಸಲು ಸಹಕಾರಿಯಾಗುತ್ತದೆ.

**ಉದಾ :**

ಹತ್ತನೆಯ ಶತಮಾನದಲ್ಲಿ ಪಂಪಕವಿ ರಚಿಸಿದ ವಿಕ್ರಮಾರ್ಜುನ ವಿಜಯವು ಇಪ್ಪೊಂದನೆಯ ಶತಮಾನದಲ್ಲಿಯೂ ಅದರ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ ಎಂದರೆ, ಅದು ಹತ್ತನೆಯ ಶತಮಾನದಲ್ಲಿದ್ದ ಮೌಲ್ಯಗಳನ್ನು ತನ್ನ ಕಾವ್ಯದಲ್ಲಿ ಹೇಳಿದ್ದು, ಆ ಮೌಲ್ಯಗಳೆ ಇಂದಿಗೂ ಇರುವುದನ್ನು ಕಾಣಬಹುದು. ದೇಶೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡು ಕಾವ್ಯ ರಚಿಸಿರುವುದರಿಂದ ಇಂದಿಗೂ ಅದು ಚರ್ಚೆಗೊಳಪಡುತ್ತಿದೆ. ಪಂಪನ ಕಾವ್ಯವನ್ನು ರನ್ನನ ಗದಾಯುದ್ದ, ಕುಮಾರವ್ಯಾಸನ ಕುಮಾರವ್ಯಾಸಭಾರತ ಮೊದಾಲಾದ ಕಾವ್ಯಗಳೊಂದಿಗೆ ತೌಲನಿಕ ವಿವೇಚನೆ ಮಾಡಲು ಸಾಧ್ಯವಾಗುತ್ತಿದೆ.

## 3. ಅರ್ಥವಿಶ್ಲೇಷಣಾ ವಿಧಾನ :

ಹಳಗನ್ನಡ ಸಾಹಿತ್ಯದಲ್ಲಿರುವ ಪಠ್ಯಗಳಲ್ಲಿ ಸಂಸ್ಕೃತ ಮತ್ತು ದೇಶೀಯ ಪದಗಳು ಬಳಕೆಯಾಗಿರುತ್ತವೆ. ಇಂತಹ ಪದಗಳನ್ನು ಬೋಧನೆ ಮಾಡುವವರು ಗುರುತಿಸಿ ಅವುಗಳ ಅರ್ಥವನ್ನು ಬೋಧನೆಯ ಸಂದರ್ಭದಲ್ಲಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಅಲ್ಲದೆ ವೃತಾಚರಣಸಂಬಂಧಿ ಪದಗಳು, ಯುದ್ಧಸಲಕರಣೆಗಳಿಗೆ ಸಂಬಂಧಿಸಿದ ಪದಗಳು, ಏಕಪದ ವಿಭಿನ್ನ ಸಂದರ್ಭದಲ್ಲಿ ವಿಭಿನ್ನ ಅರ್ಥದಲ್ಲಿ ಬಳಕೆಯಾಗುವುದು, ದಾನಕ್ಕೆ ಸಂಬಂಧಿಸಿದ ಪದಗಳು, ಅರ್ಥವ್ಯತ್ಯಾಸಗಳು, ಗಾದೆ ಮಾತುಗಳ ಹಿಂದೆ ಇರುವ

ಅರ್ಥವನ್ನು ಕಲಿಕಾರ್ಥಿಗಳಿಗೆ ಬೋಧಿಸದಿದ್ದರೆ ಅವುಗಳ ಸ್ಪಷ್ಟ ಅರ್ಥ ಅವರಿಗಾಗುವುದಿಲ್ಲ. ಈ ಕಾರಣದಿಂದ ಪದ, ವಾಕ್ಯ, ಪದ್ಯಗಳಲ್ಲಡಗಿದ ಅರ್ಥವನ್ನು ವಿಶ್ಲೇಷಿಸಿ ಹೇಳುವುದು ಸೂಕ್ತ.

**ಉದಾ :**

ಪಂಪ ಕವಿಯು **'ಅರ್ಘ್ಯ'** ಎಂಬ ಪದವನ್ನು ಎರಡು ಸಂದರ್ಭದಲ್ಲಿ ಬಳಸಿದ್ದಾನೆ. **ಅರ್ಘ್ಯ** ಎಂಬ ಪದಕ್ಕೆ 'ನೀರು' ಎಂದರ್ಥವಿದೆ. ಈ ಪದವು ಬೇರೆ ಬೇರೆ ವಾಕ್ಯಗಳಲ್ಲಿ ಬಳಕೆಯಾದಾಗ ಬೇರೆ ಬೇರೆ ಅರ್ಥವನ್ನು ಪಡೆಯುತ್ತದೆ. ಅರ್ಘ್ಯ ಎಂಬ ಒಂದೇ ಪದವು ಬೇರೆ ಬೇರೆ ವಾಕ್ಯಗಳಲ್ಲಿ ಬಳಕೆಯಾದಾಗ ಪಡೆಯುವ ಅರ್ಥವ್ಯತ್ಯಾಸವನ್ನು ಇಲ್ಲಿ ಗುರುತಿಸಬಹುದು.

**"ವ । ಎಂದು ನಾಗಾಪುರಕ್ಕೆ ವರ್ಪ ಪರುಶುರಾಮನ ಬರವಂ ಗಾಂಗೇಯಂ ಕೇಳ್ದಿದಿರ್ವಂದು ಕನಕ ರಜತ ಪಾತ್ರಂಗಳೊಳರ್ಘ್ಯಮಂ ಕೊಟ್ಟು ಪಡಮಟ್ಟು"**[3] ಎಂಬಲ್ಲಿ ಅರ್ಘ್ಯ ಎಂಬ ಪದ ಬಳಕೆಯಾಗಿದೆ. **'**ಪಾತ್ರಂಗಳೊಳರ್ಘ್ಯಮಂ' ಎಂಬಲ್ಲಿ ಬಳಕೆಯಾದ ಅರ್ಘ್ಯ ಎಂಬ ಪದ **'ಕೈತೊಳೆಯಲು ಕೊಡುವ ನೀರು'** ಎಂಬರ್ಥದಲ್ಲಿ ಬಳಕೆಯಾಗಿದೆ. ಆದರೆ ಅದೇ ಪದ ಆರನೆ ಆಶ್ವಾಸದ ಹನ್ನೊಂದನೆಯ ಪದ್ಯದ ನಂತರ ಬರುವ 'ವಚನ' ಗದ್ಯದಲ್ಲಿ ಬಳಕೆಯಾಗಿದೆ. **". . . ಕನಕ ಪಾತ್ರದೊಳರ್ಘ್ಯಮೆತ್ತಿ ಕನಕ ಕಳಸ ಸಂಭೃಶ ಶುಚಿಜಲಂಗಳಿಂದಮಾ"**[4] 'ಪಾತ್ರದೊಳರ್ಘ್ಯಮೆತ್ತಿ' ಎಂಬಲ್ಲಿ ಬಳಕೆಯಾದ 'ಅರ್ಘ್ಯ' ಎಂಬ ಪದ **'ಪೂಜಾ ದ್ರವ್ಯದಲ್ಲಿ ಬಳಸುವ ನಿರ್ಮಲವಾದ ನೀರು'** ಎಂಬರ್ಥದಲ್ಲಿ ಬಳಕೆಗೊಂಡಿದೆ. ಹಾಗಾಗಿ ಇವುಗಳ ಅರ್ಥಗಳನ್ನು ಸ್ಪಷ್ಟಪಡಿಸಿದಾಗ ಮಾತ್ರ ಮುಂದಿನ ವಿಚಾರ ತಿಳಿಯುತ್ತದೆ.

**4. ಗಮಕ ಕಲೆ :**

ಹಳಗನ್ನಡ ಪಠ್ಯಗಳು ಸಾಮಾನ್ಯವಾಗಿ ಛಂದೋನಿಯಮಗಳನ್ನು ಮೈಗೂಡಿಸಿಕೊಂಡೆ ರಚನೆಯಾದ ಸಾಹಿತ್ಯ ಪ್ರಕಾರಕ್ಕೆ ಸೇರಿದವುಗಳು. ಅವುಗಳಲ್ಲಿ ಚಂಪು, ಷಟ್ಪದಿ, ರಗಳೆ, ಸಾಂಗತ್ಯ, ತ್ರಿಪದಿ ಮೊದಲಾದ ಛಂದೋಪ್ರಕಾರಗಳಿಗೆ ತಮ್ಮದೇ ಆದ ಲಯ, ಯತಿ, ದಾಟಿಗಳಿರುತ್ತವೆ. ಅವುಗಳ ದಾಟಿಯನ್ನೇ ಗಮಕ ಕಲೆ ಎಂದು ಕರೆಯುವರು. ಹಳಗನ್ನಡದ ಕಾವ್ಯಗಳನ್ನು ಛಂದೋನಿಯಮಕ್ಕೆ ಅನುಗುಣವಾದ ಧಾಟಿಯಲ್ಲಿಯೇ ವಾಚಿಸಬೇಕಾಗುತ್ತದೆ. ಬೋಧನೆಯ ಸಂದರ್ಭದಲ್ಲಿ ಪದ್ಯಗಳನ್ನು ಗಮಕ ಶೈಲಿಯಲ್ಲಿ ಓದುವುದರಿಂದ ಬೋಧನೆಯು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಗದ್ಯದಂತೆ ಓದುವುದಕ್ಕಿಂತ ಪದ್ಯದಂತೆ ಹಾಡುವುದರಿಂದ ಅದು ಹೆಚ್ಚು ಕಾಲ ಸ್ಮೃತಿಪಟಲದಲ್ಲಿ ಉಳಿಯುತ್ತದೆ.

**ಉದಾ :**

ರಾಘವಾಂಕ ಕವಿಯ ಹರಿಶ್ಚಂದ್ರ ಕಾವ್ಯದಲ್ಲಿ ಚಂದ್ರಮತಿಯ ಪ್ರಲಾಪದ ಸನ್ನಿವೇಶದ ಸಂದರ್ಭದಲ್ಲಿ ಶೋಕ ಮತ್ತು ರೌದ್ರ ರಸದಿಂದ ಕೂಡಿದ ಎರಡು ಪದ್ಯಗಳನ್ನು ಗಮಕ ಕಲೆಯಲ್ಲಿ ಉದಾಹರಿಸಬಹುದು.

**ಶೋಕರಸದ ಪದ್ಯ** :

**ಗಳಗಳನೆ ಮುನ್ನ ಬೆಂದುಳಿದಿರ್ದಕರಿಗೊಳ್ಳಿ**
**ಗಳನೆಲ್ಲವಂ ಸಿದುಗಿ ತಂದೊಟ್ಟಿ ಮೇಲೆ ಮಂ**
**ಗಳಮಯ ಕುಮಾರನಂ ಪಟ್ಟಿರಿಸಿ ಕೆಲದೊಳುರಿವಗ್ನಯಂ ಪಿಡಿದು ನಿಂದು**
**ಬೆಳೆದಲ್ಲಿ ಬೆಳೆ ಹುಟ್ಟಿದಲ್ಲಿ ಹುಟ್ಟೆಂದು ನುಡಿ**
**ದಿಳುಹಲನುಗೆಯ್ದಿಳುಹಲಾಱದಸವಳಿದು ಬಾ**
**ಯಳಿದು ಮೊಱೆಯಿಟ್ಟೊಡಾ ದನಿಗೇಳ್ದು ನಿದ್ರೆ ತಿಳಿದೆದ್ದನಾ ಭೂಪಾಲನುಂ ॥**[5]

**ರೌದ್ರರಸ :**

**ನಟ್ಟಿರುಳು ಸುಡಗಾಡೊಳೊಬ್ಬಳೋರಂತ ಬಾ**
**ಯ್ವಿಟ್ಟು ಹಲಬುವ ವೀರನಾರಿಯಾವಳೋ ಮೀಱಿ**
**ಸುಟ್ಟಿಯಾದಡೆ ನಿನಗೆ ವೀರಬಾಹುಕನಾಣೆ ಕದ್ದು ಸುಡಬಂದೆ ನಿನ್ನ ।**
**ನಿಟ್ಟೆಲುವ ಮುಱಿವೆನೆಂದುರವಣಿಸಿ ಜಱಿಯುತ್ತ**
**ದಟ್ಟಿಸುತ ಬಂದು ಹಿಡಿದಿರ್ದ ಕಿಚ್ಚಂ ಕೆದಱಿ**
**ಮುಟ್ಟಿಗೆಯ ಮೇಲಿರ್ದ ಸುತನ ಹಿಂಗಾಲ್ವಿಡಿದು ಸೆಳೆದು ಬಿಸುಟಂ ಭೂಪನು ॥**[6]

ಹೀಗೆ ಹಳಗನ್ನಡ ಪದ್ಯಗಳನ್ನು ವಾಚಿಸುವುದಕ್ಕಿಂತ ಗಮಕ ಕಲೆಯನ್ನು ಬಳಸಿ ಹಾಡುವುದರಿಂದ ವಿದ್ಯಾರ್ಥಿಗಳಿಗೆ ಹಳಗನ್ನಡ ಪದ್ಯಗಳು ಕಠಿಣ ಎಂಬ ಮನೋಭಾವ ತೊಲಗಿ ಸುಲಭವಾದದು ಎಂಬ ಮನಸ್ಥಿತಿ ಮೂಡಲು ಸಹಾಯವಾಗುತ್ತದೆ. ಆದ್ದರಿಂದ ಹಳಗನ್ನಡ ಕಾವ್ಯ ಬೋಧಿಸುವವರು ಈ ಕಲೆಯನ್ನು ಕರಗತ ಮಾಡಿಕೊಂಡರೆ ಒಳ್ಳೆಯದೆನಿಸುತ್ತದೆ. ಇದಕ್ಕೆ ಸಂಗೀತ ಜ್ಞಾನವಿರಬೇಕೆಂದಿಲ್ಲ ಪದ್ಯಗಳನ್ನು ಲಯಬದ್ಧವಾಗಿ ಹಾಡಿದರೆ ಸಾಕಾಗುತ್ತದೆ.

**5. ವಿಮರ್ಶಾ ವಿಧಾನ :**

'ವಿಮರ್ಶೆ' ಎಂದರೆ ಉಜ್ಜಿನೋಡುವುದು ಎಂದರ್ಥ. ನಾವು ಬೋಧಿಸುವ ಪಠ್ಯಗಳನ್ನು ವಿಮರ್ಶಾತ್ಮಕವಾಗಿ ತರಗತಿಯಲ್ಲಿ ಬೋಧಿಸುವುದರಿಂದ ವಿದ್ಯಾಥಿಗಳಲ್ಲಿ ಕಲಿಕೆಯಿಂದಲೇ ಸಂಶೋಧನಾತ್ಮಕ ಮನೋಭಾವವನ್ನು ಬೆಳೆಸಲು ಸಹಾಯವಾಗುತ್ತದೆ. ಅಲ್ಲದೆ ಹಳಗನ್ನಡದ ಪಠ್ಯಗಳ ಬೋಧಿಸುವಾಗ ಅವುಗಳ ಗುಣಾವಗುಣಗಳನ್ನು ಒರೆಹಚ್ಚಿ ನೋಡಬೇಕಾಗುತ್ತದೆ. ತರಗತಿಯಲ್ಲಿ ಬೋಧಿಸುವಾಗ ಪಠ್ಯವನ್ನು ವಿಮರ್ಶಾತ್ಮಕವಾದ ರೀತಿಯಲ್ಲಿ ಹೇಳುವುದರಿಂದ ಅದರ ಮೌಲ್ಯೀಕರಣ ಮಾಡಲು ಸಾಧ್ಯವಾಗುತ್ತದೆ. ತರಗತಿಯಲ್ಲಿ ನಡೆಯುವ ಸಂವಹನವು ಏಕಮುಖವಾಗಿರದೆ ದ್ವಿಮುಖವಾಗಿರಬೇಕು. ಏಕೆಂದರೆ ಏಕಮುಖ ಸಂವಹನಕ್ಕಿಂತ ದ್ವಿಮುಖ ಸಂವಹನ ಕ್ರಿಯೆಯು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಇದರಿಂದ ತರಗತಿಗಳಲ್ಲಿ ಚರ್ಚೆಗಳೆರ್ಪಟ್ಟು ಹೊಸ ಹೊಸ ವಿಚಾರಗಳ ಮೂಲಕ ಕಾವ್ಯಗಳಲ್ಲಿಯ (ಪಠ್ಯ) ಅಧ್ಯಯನಕ್ಕೊಳಪಡಿಸಲು ಸಾಧ್ಯವಾಗುತ್ತದೆ.

**ಉದಾ :**

ವಿಕ್ರಮಾರ್ಜುನ ವಿಜಯ ಕಾವ್ಯದಲ್ಲಿ ಕವಿಯು ಕರ್ಣನ ವ್ಯಕ್ತಿತ್ವವನ್ನು ಕುರಿತು ಹೇಳಿದ ಅಭಿಮಾನ ಮಾತುಗಳನ್ನು ಮನೋವೈಜ್ಞಾನಿಕ ವಿಮರ್ಶೆಗೆ ಒಳಪಡಿಸಿ ಈ ಕೆಳಗಿ ಪದ್ಯವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಬಹುದಾಗಿದೆ.

**ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದು ಚಿತ್ತದಿಂ**
**ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇಱು ಕ**
**ರ್ಣನ ಕಡು ನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ**
**ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ ॥**[7]

ಎಂದು ಹೇಳುತ್ತಾನೆ. ಇಲ್ಲಿ ಪಂಪಕವಿಯು ಎಲ್ಲಾ ಪಾತ್ರಗಳಿಗಿಂತ ಕರ್ಣನ ಪಾತ್ರದ ಕುರಿತು ಅಭಿಮಾನದ ಮಾತುಗಳನ್ನು ಆಡುತ್ತಾನೆ. ಕರ್ಣನ ಕುರಿತು ಪಂಪನಿಗೆ ಏಕಷ್ಟು ಪ್ರೀತಿ ? ಅಭಿಮಾನ ? ಎಂಬ ಪ್ರಶ್ನೆ ಕಾಡದೆ ಇರದು. ಈ ಕಾವ್ಯದಲ್ಲಿ ಬಂದಂತೆ ಕರ್ಣನು ಹುಟ್ಟಿನಿಂದ ಹಿಡಿದು, ಸಾಯುವ ಕೊನೆಯವರೆಗೂ ಸಂಕಷ್ಟಗಳನ್ನೆ ಮೈಗೂಡಿಸಿಕೊಂಡಿರುವುದು ಕಂಡು ಬರುತ್ತದೆ. ಈ ಸನ್ನಿವೇಶಗಳು ಪಂಪನ ಮನಸಿನ ಮೇಲೇ ಅಗಾಧವಾದ ಪರಿಣಾಮವನ್ನು ಬೀರಿದೆ ಎನಿಸುತ್ತದೆ. ಮತ್ತೊಂದು ದೃಷ್ಟಿಯಿಂದ ನೋಡಿದರೆ ಕವಿಯು ಕರ್ಣನ ತ್ಯಾಗ ಗುಣಕ್ಕೆ ಮನಸೋತಂತೆ ತೋರುತ್ತದೆ. ಕವಿ ಜಿನ ಧರ್ಮದ 'ಪರಿತ್ಯಾಗ' ತತ್ವವನ್ನು ಕರ್ಣನಲ್ಲಿ ಕಂಡಿದ್ದಾನೆ. ಅದಕ್ಕಾಗಿಯೇ 'ಕರ್ಣರಸಾಯನಮಲ್ತೆ ಭಾರತಂ' ಎಂದು ಕರ್ಣನ ಕುರಿತು ಅಭಿಮಾನದ ಮಾತುಗಳನ್ನು ಆಡಿರಬೇಕು. ಈ ವಿಚಾರವನ್ನು ವಿದ್ಯಾರ್ಥಿಗಳೊಡನೆ ಚರ್ಚಿಸುವ ಮೂಲಕ ಅವರ ಯೋಚನಾ ಕ್ರಿಯೆಯನ್ನು ಚಲನಶೀಲಗೊಳಿಸಬಹುದು.

### 6. ಪ್ರಾಯೋಗಿಕ ವಿಧಾನ

ಪ್ರಾಯೋಗಿಕ ವಿಧಾನ ಎಂಬುದು ನಿಖರವಾದ ಸಾಹಿತ್ಯಿಕ ವಿಧಾನವೆಂದು ಗುರುತಿಸಬಹುದು. ಅಂದರೆ ವಿಜ್ಞಾನದಂತೆ ವಿದ್ಯಾರ್ಥಿಗಳಿಗಳಿಗೆ ಪರಾಯೋಗಿಕವಿಧಾನವನ್ನು ಅಳವಡಿಕೊಂಡು ಬೋಧಿಸುವುದು ಒಳ್ಳೆಯ ವಿಧಾನವಾಗುತ್ತದೆ. ಇಲ್ಲಿ ವಿದ್ಯಾರ್ಥಿಗಳಿಗಳಿಗೆ ಹಳಗನ್ನಡದ ಕಾವ್ಯ ಮತ್ತು ವ್ಯಾಕರಣ ಗ್ರಂಥಗಳಲ್ಲಿರುವ ಪದ್ಯಗಳನ್ನು ವಿಗ್ರಹಿಸಿ ಓದಿಸುವುದು ಅವುಗಳಿಗೆ ಅರ್ಥವನ್ನು ನಿಘಂಟುಗಳ ಸಹಾಯದಿಂದ ಸ್ವತಃ ಹುಡುಕಿಸುವ ಪ್ರಾಯೋಗಿಕತೆಯನ್ನು ಅಳವಡಿಸಿದರೆ ಮಕ್ಕಳಿಗೆ ಪಾಠವು ಸ್ಪಷ್ಟವಾಗಿ ಅರ್ಥವಾಗುತ್ತದೆ. ಎಷ್ಟೋ ವಿದ್ಯಾರ್ಥಿಗಳು ಹಳಗನ್ನಡ ಎಂದ ತಕ್ಷಣ ಅದೊಂದು ಕಠಿಣವಾದ ವಿಷಯ ಎಂದು ಭಾವಿಸುವುದುಂಟು. ಹೀಗಾಗಿ ವಿದ್ಯಾರ್ಥಿಗಳಿಗೆ ಪದ್ಯಗಳಲ್ಲಿಯ ಪದಗಳನ್ನು ವಿಗ್ರಹಿಸುವ ವಿಧಾನವನ್ನು ತರಗತಿಯಲ್ಲಿ ಅಳವಡಿಸಿಕೊಂಡರೆ ಅದು ಸುಲಭವಾಗುತ್ತದೆ. ಎಷ್ಟೋ ವಿದ್ಯಾರ್ಥಿಗಳಿಗೆ ಪದ್ಯಗಳಲ್ಲಿಯ ಪದಗಳನ್ನು ಹೇಗೆ ವಿಗ್ರಹಿಸಿ ಓದಬೇಕು ಎಂಬುದರ ಪರಿಜ್ಞಾನವೇ ಇರುವುದಿಲ್ಲ ಅಂಥವರಿಗೆ ಈ ವಿಧಾನವು ಸೂಕ್ತವೆನಿಸುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ, ಹಳಗನ್ನಡ ಪಠ್ಯಗಳನ್ನು ಓದುವಾಗ ಇಲ್ಲವೇ ಬೋಧಿಸುವಾಗ ಈ ಮೇಲೆ ಚರ್ಚಿಸಿದ ವಿಧಾನಗಳ ಮೂಲಕ ತರಗತಿಯಲ್ಲಿ ಪಠ್ಯವನ್ನು ಬೋಧಿಸಬಹುದು. ವಿದ್ಯಾಥಿಗಳಿಗೆ ಹಳಗನ್ನಡ ಪಠ್ಯಗಳು ಕಠಿಣವಾದವುಗಳಲ್ಲ ಸುಲಭವಾದವುಗಳು ಎಂಬ ಮನೋಭಾವನೆಯು ಮೂಡವಂತೆ ಮಾಡಿದಾಗ ಮಾತ್ರ ಹಳೆಯ ಸಾಹಿತ್ಯದ ಪಠ್ಯಗಳಲ್ಲಿರುವ ಮೌಲ್ಯಯುತವಾದ ಅಂಶಗಳನ್ನು ತಿಳಿಯಲು ಅನುಕೂಲವಾಗುತ್ತದೆ. ಅದಷ್ಟು ಸರಳ ವಿಧಾನಗಳನ್ನು ಪಠ್ಯ ಬೋಧನೆಗೆ ಬಳಸಿಕೊಳ್ಳಬಹುದು. ಆಧುನಿಕ ಯುಗದಲ್ಲಿ ಕಂಪ್ಯೂಟರ್ ಮಾದಲಾದ ಯಂತ್ರೋಪಕರಣಗಳನ್ನು ಬಳಸಿಕೊಳ್ಳಲು ಅನೂಕೂಲವಿದೆ. ಆಗ ಕಬ್ಬಣದ ಕಡಲೆಯಾಗಿರುವ ಹಳಗನ್ನಡ ಸಾಹಿತ್ಯವು, ಸುಲಿದ ಬಾಳೆಯ ಹಣ್ಣಿನಂತೆ ಸುಲಭವಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಸುಲಭವಾಗಿ, ಸರಳವಾಗಿ, ನಿರರ್ಗಳವಾಗಿ, ವಾಚಿಸುವ ರೂಢಿ ಬೆಳೆದು ಬರುತ್ತದೆ.

**ಡಾ.ಶ್ರೀನಿವಾಸ ಎಚ್. ದೊಡ್ಡಮನಿ, ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ**
**ಬಿ.ಎಲ್.ಡಿ.ಇ.ಎ. ಸಂಸ್ಥೆಯ ಎಸ್.ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ**